ರಾಜ್ಯದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿ ಮನೆಗಳ ನಿರ್ಮಾಣ

939 (1255) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

ಆ) ಕಳೆದ 3 ವರ್ಷಗಳಲ್ಲಿ ಎಷ್ಟು ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿತ್ತು; (ಜಿಲ್ಲಾವಾರು ವಿವರ ನೀಡುವುದು)

ಇ) ಬಿಜಾಪುರ ಜಿಲ್ಲೆಗೆ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ: (ತಾಲ್ಲೂಕುವಾರು ಮಾಹಿತಿ ನೀಡುವುದು)

ಈ) ಆಲಮಟ್ಟಿ ಯೋಜನೆಯಡಿ ಮುಳುಗಡೆಯಾಗಿರುವ ಬಿಜಾಪುರ ಜಿಲ್ಲೆಗೆ ಹೆಚ್ಚುವರಿಯಾಗಿ ಮನೆಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಲಿದೆಯೇ?

ಶ್ರೀ ಸಗೀರ್ ಅಹಮದ್ (ವಸತಿ ಸಚಿವರು) :

ಅ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ನಿರ್ಮಿಸಿದ ಮನೆಗಳ ವಿವರ:

	ಹುಡ್ಕೋ ವತಿಯಿಂದ ಸಾಲ ಪಡೆದು	ಸ.ಕ. ಇಲಾಖೆಯ ವಿ.ಫ.ಯೋ ಕ್ರೂಡೀಕೃತ ಹಣದಲ್ಲಿ
1999-2000	2000	1050
2000-2001	1985	1030
2001-2002	2291	1000

ಜಿಲ್ಲಾವಾರು ವಿವರಗಳನ್ನು ಅನುಬಂಧ - ಅ ಮತ್ತು ಆ ನಲ್ಲಿ ಲಗತ್ತಿಸಲಾಗಿದೆ.

ಆ) ಮಂಡಳಿ ವತಿಯಿಂದ ಕಳೆದ 3 ವರ್ಷಗಳಲ್ಲಿ ನಿರ್ಮಿಸುವ ಮನೆಗಳ ಗುರಿ ಈ ಕೆಳಕಂಡಂತೆ ಇದೆ.

	ಗುರಿ	ಸಾಧನೆ
1999-2000	2500	2000
2000-2001	2200	1985
2001-2002	2500	2291

ಇ) ಬಿಜಾಪುರ ಜಿಲ್ಲೆಗೆ ಕಳೆದ 3 ವರ್ಷಗಳಲ್ಲಿ ನಿರ್ಮಿಸುವ ಮನೆಗಳ ಗುರಿ ಈ ಕೆಳಕಂಡಂತೆ ಇದೆ.

	ಹುಡ್ಕೋ ವತಿಯಿಂದ ತೆಗೆದುಕೊಂಡಿರುವ ಮನೆಗಳು
1999-2000	250
2000-2001	50
2001-2002	150

ಈ) ಆಲಮಟ್ಟಿ ಯೋಜನೆಯಿಂದಾಗಿ ಮುಳುಗಡೆ ಪ್ರದೇಶ ಕೊಳಚೆ ನಿವಾಸಿಗಳ ಪುನರ್ ವಸತಿಗಾಗಿ ವಾಂಬೆ ಯೋಜನೆಯಡಿಯಲ್ಲಿ ಮೊದಲನೇ ಹಂತದಲ್ಲಿ 163 ಮನೆಗಳನ್ನು ಎರಡನೇ ಹಂತದಲ್ಲಿ 1000 ಮನೆಗಳನ್ನು ತೆಗೆದುಕೊಳ್ಳಲಾಗಿದೆ, ಮೊದಲನೇ ಹಂತದ 163 ಮನೆಗಳು ನಿರ್ಮಾಣ ಹಂತದಲ್ಲಿವೆ.

ಅನುಬಂಧ-ಅ

ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಕಳೆದ ಮೂರು ವರ್ಷಗಳಲ್ಲಿ ವಿಶೇಷ ಘಟಕ ಯೋಜನೆಯಡಿ ಕಟ್ಟಿರುವ ಮನೆಗಳ ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	1999-2000		2000-2001		2001-2002		
		ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ	ಒಟ್ಟು
1	2	3	4	5	6	7	8	9
1.	ಬೆಂಗಳೂರು ನಗರ	0	0	0	0	0	0	0
2.	ಬೆಂಗಳೂರು ಗ್ರಾಮಾಂತರ	95	95	90	90	90	90	275
3.	ಬಾಗಲಕೋಟೆ	30	30	25	25	20	20	75
4.	ಬಳ್ಳಾರಿ	10	10	10	10	12	12	32
5.	ಬೆಳಗಾಂ	0	0	0	0	0	0	0
6.	ಬೀದರ	8	8	7	7	9	9	24
7.	ಬಿಜಾಪುರ	40	40	50	50	60	60	150
8.	ಚಿಕ್ಕಮಗಳೂರು	0	0	0	0	0	0	0
9.	ಚಿತ್ರದುರ್ಗ	50	50	40	40	40	40	130
10.	ಚಾಮರಾಜನಗರ	36	36	50	50	57	57	143
11.	ದಾವಣಗೆರೆ	30	30	30	30	40	40	100
12.	ದಾರವಾಡ	35	35	32	32	30	30	97
13.	ದಕ್ಷಿಣ ಕನ್ನಡ	0	0	0	0	0	0	0
14.	ಗದಗ	15	15	16	16	13	13	44
15.	ಗುಲ್ಬರ್ಗಾ	90	90	100	100	90	90	280
16.	ಹಾಸನ	120	120	95	95	99	99	314
17.	ಹಾವೇರಿ	30	30	28	28	30	30	88
18.	ಕೊಡಗು	0	0	0	0	0	0	0
19.	ಕೋಲಾರ	170	170	150	150	96	96	416
20.	ಕೊಪ್ಪಳ	25	25	30	30	45	45	100
21.	ಮಂಡ್ಯ	100	100	120	120	122	122	342
22.	ಮೈಸೂರು	50	50	57	57	37	37	144
23.	ರಾಯಚೂರು	30	30	20	20	50	50	100
24.	ಶಿವಮೊಗ್ಗ	44	44	40	40	20	20	104
25.	ತುಮಕೂರು	30	30	20	20	30	30	80
26.	ಉತ್ತರ ಕನ್ನಡ	12	12	20	20	10	10	42
27.	ಉಡುಪಿ	0	0	0	0	0	0	0
	ಒಟ್ಟು	1050	1050	1030	1030	1000	1000	3080

ಕ್ರ. ಸಂ.	ಜಿಲ್ಲೆಯ ಹೆಸರು	1999-2000		2000-2001		2001-2002	
		ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ
1	2	3	4	5	6	7	8
1.	ಬೆಂಗಳೂರು ನಗರ	200	178	180	163	500	480
2.	ಬೆಂಗಳೂರು ಗ್ರಾಮಾಂತರ	70	58	80	70	110	100
3.	ಬಾಗಲಕೋಟೆ	0	0	0	0	75	69
4.	ಬಳ್ಳಾರಿ	0	0	50	32	80	78
5.	ಬೆಳಗಾಂ	0	0	75	66	25	19
6.	ಬೀದರ	200	140	0	0	190	174
7.	ಬಿಜಾಪುರ	300	202	160	138	135	125
8.	ಚಿಕ್ಕಮಗಳೂರು	0	0	0	0	0	0
9.	ಚಿತ್ರದುರ್ಗ	70	24	0	0	0	0
10.	ಚಾಮರಾಜನಗರ	0	0	0	0	40	26
11.	ದಾವಣಗೆರೆ	0	0	0	0	0	0
12.	ದಾರವಾಡ	200	152	50	31	30	20
13.	ದಕ್ಷಿಣ ಕನ್ನಡ	0	0	0	0	0	0
14.	ಗದಗ	0	0	0	0	270	253
15.	ಗುಲ್ಬರ್ಗಾ	100	80	30	20	180	152
16.	ಹಾಸನ	400	380	620	599	150	140
17.	ಹಾವೇರಿ	0	0	0	0	0	0
18.	ಕೊಡಗು	0	0	0	0	0	0
19.	ಕೋಲಾರ	100	74	125	100	210	208
20.	ಕೊಪ್ಪಳ	300	231	340	301	75	65
21.	ಮಂಡ್ಯ	0	0	0	0	180	175
22.	ಮೈಸೂರು	260	249	175	165	200	179
23.	ರಾಯಚೂರು	200	162	200	188	60	50
24.	ಶಿವಮೊಗ್ಗ	0	0	0	0	0	0
25.	ತುಮಕೂರು	100	88	125	118	0	0
26.	ಉತ್ತರ ಕನ್ನಡ	0	0	0	0	0	0
27.	ಉಡುಪಿ	0	0	0	0	0	0
	ಒಟ್ಟು	2500	2000	2200	1985	2500	2291

ಅನುಬಂಧ - 3

ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯಿಂದ 1999-2000 ರಿಂದ 2001-02 ರವರೆಗೆ ಬಿಜಾಪುರ ಜಿಲ್ಲೆಗೆ ಮಂಜೂರು ಮಾಡಲಾದ ಮನೆಗಳ ವಿವರ (ತಾಲ್ಲೂಕುವಾರು)

ಕ್ರಮ ಸಂಖ್ಯೆ	ವರ್ಷ	ಯೋಜನೆಯ ವಿವರ	ಮನೆಗಳ ಸಂಖ್ಯೆ
1	1999-2000	ಮಿನಿಮಾದರ ಓಣಿ ಕೊ.ಪ್ರದೇಶ	50
		ಗೊಲ್ಲರ್ ಓಣಿ, ಇಂಡಿ	50
		ರಂಗೀ ಮಸೀದಿ	50
		ಅಲಪ ಮಸೀದಿ	50
		ದುರ್ಗಾದೇವಿ ನಗರ ಇಳಕಲ್	50
		ಒಟ್ಟು	250

2	2000-2001	ಸಿಂದಗಿ ಹಂತ-1	50
3	2001-2002	ಮುದ್ದೋಳ ಪಟ್ಟಣ	50
		ಸೌದತ್ತಿ	50
		ಸಿಂದಗಿ ಹಂತ-2	50
		ಒಟ್ಟು	150

ರಾಜೀವ್‌ಗಾಂಧಿ ವಸತಿ ಯೋಜನೆ

940 (1304) ಶ್ರೀ ಡಾ।। ಬಾರತೀ ಶಂಕರ್ (ಟಿ. ನರಸೀಪುರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ್ ಗಾಂಧಿ ವಸತಿ ಯೋಜನೆಯಲ್ಲಿ ಕಳೆದ 3 ವರ್ಷಗಳಲ್ಲಿ ಸರ್ಕಾರವು ಎಷ್ಟು ಮನೆಗಳನ್ನು ನಿರ್ಮಾಣ ಮಾಡುವ ಗುರಿಯನ್ನು ಇಟ್ಟುಕೊಂಡಿದೆ;

ಆ) ಈವರೆಗೆ ಸಾಧಿಸಿರುವ ಗುರಿಯೇನು;

ಇ) ಮನೆಯೊಂದಕ್ಕೆ ಒದಗಿಸುವ ಹಣ ಇಂದಿನ ಸಾಮಗ್ರಿಗಳ ಬೆಲೆಗೆ ಅನುಗುಣವಾಗಿದೆಯೇ;

ಈ) ನವಗ್ರಾಮ ಯೋಜನೆಯಲ್ಲಿ ಗುರಿ ಸಾಧಿಸಿದ ಕ್ಷೇತ್ರಗಳಿಗೆ ಈ ಸಾಲಿನಲ್ಲಿ ಹೆಚ್ಚುವರಿ ಮನೆಗಳನ್ನು ಒದಗಿಸಲಾಗುವುದೇ?

ಶ್ರೀ ಸಗೀರ್ ಅಹಮದ್ (ವಸತಿ ಸಚಿವರು) :

ಅ) 2000-01 ರಿಂದ 2001-02 ರ ವರೆಗೆ 4,10,732 ಮನೆಗಳು

ಆ) 2000-01 ರಿಂದ 2002-03 ರಲ್ಲಿ 31-01-2003 ರವರೆಗೆ 4,55,731 ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಇದರಲ್ಲಿ ಹಿಂದಿನ ಶ್ರೇಣಿಯಲ್ಲಿ ಮಂಜೂರಾದ ಮನೆಗಳ ನಿರ್ಮಾಣ ಕೂಡ ಸೇರಿರುತ್ತದೆ.

ಇ) ಹೌದು

ಈ) ಇಲ್ಲ

ನಾಗಮಂಗಲ ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯಡಿ ವಸತಿ ಕಲ್ಪಿಸುವುದು

941 (1583) ಶ್ರೀ ಚಲುವರಾಯಸ್ವಾಮಿ ಎನ್. (ನಾಗಮಂಗಲ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಆದೇಶದಂತೆ ವಸತಿಹೀನರಿಗೆ ವಸತಿ ಕಲ್ಪಿಸಿಕೊಟ್ಟು ಅವರನ್ನು ಆಶ್ರಯ ಯೋಜನೆಯ ಅಡಿಯಲ್ಲಿ ಆಯ್ಕೆ ಮಾಡಲು ನಿರ್ದೇಶನ ಮಾಡಿರುವುದು ನಿಜವೇ; ಆದರಂತೆ ನಾಗಮಂಗಲ ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಅರ್ಹ ಫಲಾನು ಭವಿಗಳನ್ನು ಆಯ್ಕೆ ಮಾಡಿ ಫಲಾನುಭವಿಗಳಿಗೆ ವಸತಿ ಹಂಚುವ ಸಂದರ್ಭದಲ್ಲಿ ಸರ್ಕಾರ ತಡೆ ಆಜ್ಞೆ ನೀಡಿರುವುದು ನಿಜವೇ; ಹಾಗಿಲ್ಲದಿದ್ದಲ್ಲಿ, ತಡೆಯಾಜ್ಞೆಯನ್ನು ತೆರವುಗೊಳಿಸಿ ಆಯ್ಕೆ ಮಾಡಿದ ಫಲಾನುಭವಿಗಳಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು) :

ಅ) ಆಶ್ರಯ ವಸತಿ ಯೋಜನೆಯ ನಿಯಮಮಾನುಸಾರ ಆಶ್ರಯ ಸಮಿತಿಯು ಫಲಾನುಭವಿಗಳ ಆಯ್ಕೆ ಮಾಡಲು ನಿರ್ದೇಶನ ನೀಡಿರುವುದು ನಿಜ ನಾಗಮಂಗಲ ತಾಲ್ಲೂಕಿನ ಆಶ್ರಯ ಸಮಿತಿಯ ಸಭೆಯ ನಡವಳಿಗೆ ತಡೆಯಾಜ್ಞೆಯನ್ನು ನೀಡಿರುವುದಿಲ್ಲ. ಆದಕಾರಣ ತಡೆಯಾಜ್ಞೆಯನ್ನು ತೆರವುಗೊಳಿಸುವುದು ಉದ್ಭವಿಸುವುದಿಲ್ಲ.